ಯಾರೂ ಕರೆಯುತ್ತಿಲ್ಲವಲ್ಲ ಎಂದು ಚಡಪಡಿಕೆ ಆರಂಭವಾಗುತ್ತದೆ. ಜಡಿಮಳೆಯಿಂದ ಒದ್ದೆಯಾಗಿ ಮಲಗಿದ ನೆಲಕ್ಕೆ ಉರಿವ ಸೂರಪ್ಪ ಬಂದು ತಬ್ಬಲಿ ಎಂದು ಮನ ತಹತಹಿಸುತ್ತದೆ. ದಿಟ, ಊರೂರಿಗೆ ಹೋಗಿ ಬೀದಿಯಲ್ಲಿ ಫಕೀರನಂತೆ ಅಲೆಯದಿದ್ದರೆ ನಾನು ಸತ್ತೇಹೋಗುತ್ತೇನೆ. ಸಾರ್ವಜನಿಕರ ಒತ್ತಾಯವಿಲ್ಲದಿದ್ದರೂ ಭಾಷಣ ಮಾಡುವ ಚಟವೊಂದು ನನ್ನೊಳಗೆ ತುಡಿಯುತ್ತಿರಬೇಕು. 'ಆರೋಗ್ಯಕ್ಕೆ ಹಾನಿಕರ' ಎಂದು ಗೊತ್ತಿದ್ದರೂ ತಂಬಾಕು ಜಗಿಯುವವರಂತೆ ಭಾಷಣದ ವ್ಯಸನವು ನನಗೆ ರೋಗದಂತೆ ಅಂಟಿಕೊಂಡಿದೆ. ಇಲ್ಲದಿದ್ದರೆ ಎರೆಹುಳವೂ ಇಲ್ಲದ ಗಾಳವನ್ನು ಕಚ್ಚಿ ವಿಲವಿಲಿಸುತ್ತಿರುವುದೇಕೆ? ಸತತ ಸೋಲುಗಳಿಂದ ಸುಸ್ತಾದ ಗಳಿಗೆಯಲ್ಲಿ ಇನ್ನು ಮುಂದೆ ಭಾಷಣ ಮಾಡಲಾರೆ ಎಂಬ ಸಂಕಲ್ಪವನ್ನು ಮತ್ತೊಂದು ಕರೆ ಬಂದೊಡನೆ ಮುರಿಯುತ್ತಿರುವುದೇಕೆ? ಮನೆಗೆ ಯಾರಾದರೂ ಹೊರಗಿಂದ ಬೆಂಕಿಹಚ್ಚಿದರೆ ತಡೆಯಬಹುದು. ಮನೆಯೊಳಗಿನವರೇ ಬೀಡಿಗೆ ಬೆಂಕಿ ಕೊಟ್ಟುಕೊಳ್ಳುತ್ತಿದ್ದರೆ ಬಚಾವು ಮಾಡುವುದಾದರೂ ಹೇಗೆ? ಕಟ್ಟಿಗೆಯೊಳಗಿನ ಕಿಡಿಯಂತಿರುವ ಚೈತನ್ಯ ಹೊಮ್ಮಿಸಲು ಬರೆಹಕ್ಕಿಂತ ಮಾತೇ ಸುಲಭ. ಅದು ನಾವಾಡುವ ಮಾತೇ ಆಗಬೇಕೆಂದಿಲ್ಲ. ಬೇರೆಯವರಾಡುವ ಮಾತೂ ಆದೀತು. ಜನರಾಡುವ ಮಾತನ್ನು ಆಲಿಸದವರಿಗೆ ಜನರಿಗೆ ಭಾಷಣ ಕೊಡುವ ಹಕ್ಕಾದರೂ ಎಲ್ಲಿದೆ? ಜೀವನವಿಡೀ ವ್ಯಸನದಂತೆ ಮಾತಾಡಿ ಮಲಿನವಾಗಿರುವ ನನ್ನೊಳಗಿನ ಶಿಕ್ಷಕ ಭಾಷಣಕಾರ, ತನ್ನ ಏಕಮುಖೀ ಮಾತನ್ನು ನಿಲ್ಲಿಸುವುದು ಒಳ್ಳೆಯದು. ಪ್ರಾಯಶ್ಚಿತ್ತವಾಗಿ ಬೀದಿಯ ಜಗಳವನ್ನು, ಮಕ್ಕಳ ತೊದಲನ್ನು, ಪಶುಪಕ್ಷಿಗಳ ಪಿಸುಗುಟ್ಟುಗಳನ್ನು, ಪರಿಸರದಲ್ಲಿ ಹುಟ್ಟುವ ಸಮಸ್ತ ಸಪ್ಪಳಗಳನ್ನು, ಕಬೀರ ಹೇಳುವಂತೆ ಇರುವೆ ಹೆಜ್ಜೆಯ ಸಪ್ಪಳವನ್ನು ಸಂಗೀತದ ಹಾಗೆ ಕೇಳುತ್ತಾ ಇರಬೇಕೆಂದು —ಯಾಕೊ ಉತ್ಕಟವಾಗಿ ಅನಿಸುತ್ತಿದೆ.


**ರಹಮತ್ ತರೀಕೆರೆ**

ಸಂಸ್ಕೃತಿ ಚಿಂತಕ, ಹತ್ತಾರು ಪುಸ್ತಕಗಳ ಲೇಖಕ ರಹಮತ್ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. 'ಲೋಕ ವಿರೋಧಿಗಳ ಜೊತೆಯಲ್ಲಿ', 'ಕತ್ತಿಯಂಚಿನ ದಾರಿ', 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು' ಅವರ ಮುಖ್ಯ ಪುಸ್ತಕಗಳಾಗಿವೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಅವರ ಊರು.